ಆ ಫಲಾನುಭವಿಗಳ ಆಯ್ಕೆ ಕುರಿತಂತೆ ರಚನೆಯಾದ ಸಮಿತಿಯು ಕಾಲಕಾಲಕ್ಕೆ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಕನಿಷ್ಠತಿಕನಿಷ್ಠ ಸಂಖ್ಯೆಯಲ್ಲಾದರೂ ಹೊಂದಿರುವ ರೈತರನ್ನು ಅದ್ಯತಾನುಸಾರ ಆಯ್ಕೆ ಮಾಡತಕ್ಕದ್ದು ಹಾಗೂ ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಅಲ್ಪಸಂಖ್ಯಾತರು/ ಹಿಂದುಳಿದ ವರ್ಗಗಳ ರೈತರಿಗೆ ಆಯ್ಕೆ ಮಾಡತಕ್ಕದ್ದು

ಇ. ಎತ್ತುಗಳನ್ನು ಸ್ಥಳೀಯ ಕೃಷಿ ಮಾರುಕಟ್ಟೆ ಸಮಿತಿಯ ನಿಯಮಗಳಿಗೆ ಅನುಗುಣವಾಗಿ ಖರೀದಿಸಿ ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಇಲಾಖೆಯ ಪ್ರಮಾಣ ಪತ್ರದೊಂದಿಗೆ ಗುರುತಿನ ಮುದ್ರೆಯನ್ನು ಹಾಕಿಸಿ ಫಲಾನುಭವಿಗಳು ಪಡೆಯತಕ್ಕದ್ದು ಎತ್ತಿನಗಾಡಿಗಳನ್ನು ಜಿಲ್ಲಾ ಕೃಷಿ ಉಪಕರಣಗಳ ಸಮಿತಿ ಅನುಮೋದಿಸಿದ ತಯಾರಕರಿಂದ ಖರೀದಿಸತಕ್ಕದ್ದು

ಈ. ಯಾವುದೇ ಕಾರಣಕ್ಕು ಈ ಯೋಜನೆಯಡಿ ಪಡೆದ ಎತ್ತು ಮತ್ತು ಎತ್ತಿನಗಾಡಿಗಳನ್ನು ಐದು ವರ್ಷಗಳ ವರೆಗೆ ಪರಭಾರೆ ಅಥವಾ ಮಾರಾಟ ಮಾಡಬಾರದು

668 (1142) ಶ್ರೀ ಬಸವರಾಜು ಎ ಎಸ್ (ಅರಸೀಕೆರೆ) – ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೊಬ್ಬರಿ ಖರೀದಿಗೆ ಬೆಂಬಲ ಬೆಲೆಯನ್ನು ಸರ್ಕಾರ ನಿಗದಿಪಡಿಸಿದೆಯೇ , ಹಾಗಿದ್ದಲ್ಲಿ, ಬೆಂಬಲ ಬೆಲೆ ಎಷ್ಟು ,

ಆ) ರಾಜ್ಯದಲ್ಲಿ ಇತ್ತೀಚೆಗೆ ಕೊಬ್ಬರಿ ಖರೀದಿಗೆ ಚಳವಳಿ ನಡೆಸಿ ಗಡುವು ನೀಡಿದ್ದು ವಿವಿಧ ತೆಂಗಿನ (ಕೊಬ್ಬರಿ) ಮಾರುಕಟ್ಟೆಗಳಲ್ಲಿ ಗಲಾಟೆ ನಡೆಯುತ್ತಿರುವುದು ನಿಜವೇ ,

ಇ) ಈ ಬೆಂಬಲ ಬೆಲೆಯಿಂದಾಗಿ ರೈತರಿಗೆ ಸಿಗುವ ಲಾಭ ಎಷ್ಟು ,

ಈ) ಟೆಂಡರ್ ಆದ ನಂತರ ಬಿಲ್ ತೋರಿಸಿದಲ್ಲಿ ಹಣ ಪಾವತಿ ಮಾಡುವಂತೆ ಸೂಚಿಸಲಾಗಿದೆಯೇ ,

ಉ) ನ್ಯಾಫೆಡ್ ಮೂಲಕ ನೇರ ಖರೀದಿಗೆ ಸರ್ಕಾರ ಮುಂದಾಗುವುದೇ , ಇಲ್ಲದಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರದ ನಿಲುವು ಏನು ,

ಊ) ರೈತರ ನಿಯೋಗಕ್ಕೆ ಸರ್ಕಾರ ನೀಡಿರುವ ಭರವಸೆ ಏನು, ಭರವಸೆಯನ್ನು ಈಡೇರಿಸಲಾಗುವುದೇ ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)–

ಅ) ಕೊಬ್ಬರಿಗೆ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರವು ನಿಗದಿಪಡಿಸುತ್ತದೆ 2006–07ನೇ ಸಾಲಿನಲ್ಲಿ ಉಂಡೆ ಕೊಬ್ಬರಿಗೆ ಪ್ರತಿ

ಕ್ವಿಂಟಾಲ್‌ಗೆ 3,840/– ಹಾಗೂ ಮಿಲ್ಲಿಂಗ್ ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ ರೂ 3,590/– ಗಳ ಬೆಂಬಲ ಬೆಲೆಯನ್ನು ನಿಗದಿಪಡಿಸಿದೆ

ಆ) ಹೌದು

ಇ) ರಾಜ್ಯ ಸರ್ಕಾರ ರೈತರ ಹಿತದೃಷ್ಟಿಯಿಂದ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ರೈತರು ತಂದ ಕೊಬ್ಬರಿಯನ್ನು ಟೆಂಡರ್ / ಹರಾಜು ಮುಖಾಂತರ ಗರಿಷ್ಠ ರೂ 4700 ಕ್ಕಿಂತ ಕಡಿಮೆ ಬೆಲೆಗೆ ಮಾರಾಟವಾದಾಗ ವ್ಯತ್ಯಾಸದ ಹಣವನ್ನು ಪರಿಹಾರವಾಗಿ ಗರಿಷ್ಠ ರೂ 600 00 ರವರೆಗೆ ದಿನಾಂಕ 11 1 2007 ರಿಂದ 24 1 2007 ರವರೆಗೆ ನೀಡಿದೆ

ಈ) ಟೆಂಡರ್ ಅಥವಾ ಹರಾಜಿನಲ್ಲಿ ಕೊಬ್ಬರಿ ಖರೀದಿಸಿದಲ್ಲಿ ಹಣ ಪಾವತಿಸುವಂತೆ ಸೂಚಿಸಲಾಗಿದೆ

ಉ) ನಾಫೆಡ್ ಮೂಲಕ ಕೊಬ್ಬರಿ ಖರೀದಿಸಲು ಸರ್ಕಾರ ವ್ಯವಸ್ಥೆ ಮಾಡಿದೆ ದಿನಾಂಕ 30 1 2007ರಿಂದ ತಿಪಟೂರು, ತುರುವೇಕೆರೆ, ಅರಸೀಕೆರೆ, ನಾಗಮಂಗಲ, ಚನ್ನರಾಯಪಟ್ಟಣ, ಗುಬ್ಬಿ ಮಾರುಕಟ್ಟೆ ಪ್ರಾಂಗಣದಲ್ಲಿ ನಾಫೆಡ್ ಸಂಸ್ಥೆಯವರು ಖರೀದಿ ಕೇಂದ್ರಗಳನ್ನು ಸ್ಥಾಪಿಸಿ ಕೊಬ್ಬರಿಯನ್ನು ಖರೀದಿಸಲು ಆರಂಭಿಸಿರುತ್ತಾರೆ

ಊ) ಮೇಲಿನ ಪ್ರಶ್ನೆಗಳಿಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

669 (413) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2006-07ನೇ ಸಾಲಿನಲ್ಲಿ ಅತಿವೃಷ್ಟಿ / ಅನಾವೃಷ್ಟಿಯಿಂದ ಎಷ್ಟು ವಿಸ್ತೀರ್ಣಕ್ಕೆ ಬೆಳೆ ವಿಮೆ ನಿಗದಿಪಡಿಸಲಾಗಿದೆ ,

ಆ) ಬೆಳೆ ವಿಮೆ ಪಡೆದ ರೈತರ ಸಂಖ್ಯೆ ಎಷ್ಟು ,

ಇ) ಬೆಳೆ ವಿಮೆಗೆ ಸರ್ಕಾರ ಬಿಡುಗಡೆಗೊಳಿಸಿದ ಅನುದಾನವೆಷ್ಟು,

ಈ) ಚಾಮರಾಜನಗರ ಜಿಲ್ಲೆಗೆ 2006-07ನೇ ಸಾಲಿನಲ್ಲಿ ಅತಿವೃಷ್ಟಿ / ಅನಾವೃಷ್ಟಿಯಿಂದ ಎಷ್ಟು ವಿಸ್ತೀರ್ಣಕ್ಕೆ ಬೆಳೆ ವಿಮೆ ಸೀಮಿತವಾಗಿದೆ,

ಉ) ಚಾಮರಾಜನಗರ ಜಿಲ್ಲೆಯಲ್ಲಿ ಬೆಳೆ ವಿಮೆ ಪಡೆದ ರೈತರ ಸಂಖ್ಯೆ ಎಷ್ಟು ,